# ಗ್ರೂಪ್ ಕಾಲ್‌ಗಾಗಿ ಡ್ಯುಯೊ ಆ್ಯಪ್

■ ಶಶಿಕುಮಾರ್ ಸಿ.



ಕಾನ್ಫರೆನ್ಸ್ ಕಾಲ್ ಮೂಲಕ ಒಂದೇ ಸಮಯದಲ್ಲಿ ಹತ್ತಾರು ಮೊಬೈಲ್ ನಂಬರ್‌ಗಳೊಂದಿಗೆ ಸಂಪರ್ಕ ಸಾಧಿಸಿ ಮಾತನಾಡುವ ವ್ಯವಸ್ಥೆ ಈಗಾಗಲೇ ಚಾಲ್ತಿಯಲ್ಲಿದೆ. ಆ ಸಾಲಿಗೆ 'ಗೂಗಲ್ ಡ್ಯುಯೊ' ಆ್ಯಪ್ ಸಹ ಈಗ ಸೇರಿದೆ.

'ಗೂಗಲ್ ಡ್ಯುಯೊ' ಒಂದು ವಿಡಿಯೊ ಕಾಲಿಂಗ್ ಆ್ಯಪ್ ಆಗಿದ್ದು, ಇಂಟರ್ನೆಟ್ ಸೌಲಭ್ಯವಿದ್ದರೆ ಸುಲಭವಾಗಿ ಮತ್ತೊಬ್ಬರ ಜೊತೆ ವಿಡಿಯೊ ಕಾಲ್ ಮೂಲಕ ಮಾತನಾಡಬಹುದಿತ್ತು. ಕಾನ್ಫರೆನ್ಸ್ ಕಾಲಿಂಗ್ ಮಾದರಿಯನ್ನು ವಿಡಿಯೊ ಕಾಲಿಂಗ್‌ನಲ್ಲೂ ತರಲು ನಿಟ್ಟಿನಲ್ಲಿ ಗೂಗಲ್ ಈ ಹಿಂದೆ ಕಾರ್ಯೋನ್ಮುಖವಾಗಿತ್ತು. ಅದರ ಪ್ರತಿಫಲವಾಗಿ ಗೂಗಲ್, ಡ್ಯುಯೊ ಆ್ಯಪ್‌ನಲ್ಲಿ ಗ್ರೂಪ್ ಕಾಲಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಿ ಬಳಕೆಗೆ ಬಿಡುಗಡೆ ಮಾಡಿದೆ.

ಕಾನ್ಫರೆನ್ಸ್ ಕಾಲಿಂಗ್ ರೀತಿ ಹತ್ತಾರು ಮಂದಿಯ ಜೊತೆಗೆ ಏಕಕಾಲಕ್ಕೆ ಡ್ಯುಯೊದಲ್ಲಿ ಮಾತನಾಡಲು ಸಾಧ್ಯವಾಗದು. ಬದಲಿಗೆ ಗ್ರೂಪ್ ವಿಡಿಯೊ ಕಾಲಿಂಗ್ ಮೂಲಕ ಎಂಟು ಮಂದಿ ಮಾತ್ರ ಮಾತನಾಡಬಹುದಾಗಿದೆ. ಅದಕ್ಕಾಗಿ ಬಳಕೆದಾರರು, ತಾವು ಮಾತನಾಡಬಯಸುವ ಎಂಟು ಮಂದಿಯ ಮೊಬೈಲ್ ನಂಬರ್‌ಗಳನ್ನು ಒಂದು ಗ್ರೂಪ್ ಆಗಿ ಕ್ರಿಯೇಟ್ ಮಾಡಿಕೊಳ್ಳಬೇಕು.

ಅದಕ್ಕೆ ಮಾಡಬೇಕಾದದ್ದು ಇಷ್ಟೇ. ಮೊದಲಿಗೆ ಗೂಗಲ್ ಡ್ಯುಯೊ ಆ್ಯಪ್‌ಗೆ ಭೇಟಿ ಕೊಡಬೇಕು. ಡಿಸ್‌ಪ್ಲೇ ಮೇಲೆ ಕಾಣುವ ಕ್ರಿಯೇಟ್ ಗ್ರೂಪ್ ಆಪ್ಷನ್ ಕ್ಲಿಕ್ಕಿಸಿದರೆ, ಡ್ಯುಯೊ ಬಳಕೆದಾರರ ನಂಬರ್‌ಗಳು ತೆರೆದುಕೊಳ್ಳುತ್ತವೆ. ಬಳಿಕ ನೀವು ಯಾರೊಂದಿಗೆ ಮಾತನಾಡಬಯಸುತ್ತೀರೊ ಅವರೆಲ್ಲರ ಮೊಬೈಲ್‌ಗಳನ್ನು ಒಂದೊಂದಾಗಿಯೇ ಆಯ್ಕೆ ಮಾಡಿಕೊಂಡು 'ಡನ್' ಆಯ್ಕೆಯನ್ನು ಕ್ಲಿಕ್ಕಿಸಿ. ಅದಕ್ಕೆ ನಿಮ್ಮಿಷ್ಟದ ಹೆಸರನ್ನು ಟೈಪ್ ಮಾಡಿ. ಬಳಿಕ ಅದರ ಮೇಲೆ ಕ್ಲಿಕ್ಕಿಸಿ, ಸ್ಟಾರ್ಟ್ ಆಯ್ಕೆಯನ್ನು ಒತ್ತಿ ವಿಡಿಯೊ ಕಾಲ್ ಮಾಡಿ.

ಈ ಸೌಲಭ್ಯದ ಜೊತೆಗೆ ಡೇಟಾ ಸೇವಿಂಗ್ ಮೋಡ್ ಅನ್ನೂ ಗೂಗಲ್ ಒದಗಿಸಿದ್ದು, ಬಳಕೆದಾರರು ಕಡಿಮೆ ವೇಗದ ಇಂಟರ್‌ನೆಟ್ ಇರುವಲ್ಲಿಯೂ ಗೂಗಲ್ ಡ ಬಳಸಲು ಅನುಕೂಲವಾಗುತ್ತದೆ. ಆ್ಯಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಮಾತ್ರ ಈ ಆಯ್ಕೆ ದೊರೆಯಲಿದ್ದು, ವಿಡಿಯೊ ಮೆಸೇಜ್‌ನಲ್ಲಿ ಟೆಕ್ಸ್ಟ್, ಇಮೋಜಿ ಅಥವಾ ಡೂಡಲ್ ಅನ್ನೂ ಸೇರಿಸಬಹುದು.

ಡೇಟಾ ಸೇವ್ ಮೋಡ್ ಸೌಲಭ್ಯದಿಂದ ದೇಶದಲ್ಲಿ ಡ್ಯುಯೊ ಬಳಕೆದಾರರಿಗೆ ಹೆಚ್ಚು ಜನರಿಗೆ ಪ್ರಯೋಜನವಾಗಲಿದೆ. ಉತ್ತಮ ಧ್ವನಿ ಮತ್ತು ವೀಡಿಯೊ ಕರೆ ಗುಣಮಟ್ಟ ಗೂಗಲ್ ಡ್ಯುಯೊದ ವಿಶೇಷತೆಯಾಗಿದೆ. ■

# ತಡೆರಹಿತ ಇನ್‌ಸ್ಟಾಗ್ರಾಂಗೆ ಹೀಗೆ ಮಾಡಿ

ನೆಟ್‌ವರ್ಕ್‌ನ ಪ್ರಮಾಣ ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಕೆಲವೆಡೆ ವೇಗದ ನೆಟ್‌ವರ್ಕ್ ಇನ್ನೂ ಕೆಲವೆಡೆ ಮಂದ ವೇಗದ ನೆಟ್‌ವರ್ಕ್. ನೆಟ್‌ವರ್ಕ್ ಯಾವ ಪ್ರಮಾಣದಲ್ಲಿರುತ್ತದೆಯೋ ಆ ಪ್ರಮಾಣದಲ್ಲಿ ಅಂತರ್ಜಾಲದ ವೇಗ ಇರುತ್ತದೆ. ಆದರೆ, ಇನ್‌ಸ್ಟಾ ಗ್ರಾಂ ಬಳಕೆದಾರರಿಗೆ ಈ ಸಮಸ್ಯೆ ಎದುರಾಗದು.

ಹೇಗೆ ಅಂತೀರಾ, ಇಲ್ಲಿ ನೋಡಿ. ಕಡಿಮೆ ವೇಗದ ಇಂಟರ್‌ನೆಟ್ ಇದ್ದಾಗಲೂ ತಡೆರಹಿತ ಇನ್‌ಸ್ಟಾ ಗ್ರಾಂ ವೀಕ್ಷಣೆಗೆ ಅನುಕೂಲವಾಗುವಂತೆ ಹೊಸ ಅಪ್‌ಡೇಟ್ ಅನ್ನು ಇನ್‌ಸ್ಟಾ ಗ್ರಾಂ ಪರಿಚಯಿಸಿದೆ. ಕಡಿಮೆ ಇಂಟರ್‌ನೆಟ್ ಡೇಟಾ ಮತ್ತು ಹೆಚ್ಚು ವೇಗವಿಲ್ಲದ, ಸೂಕ್ತ ನೆಟ್‌ವರ್ಕ್ ಸೌಲಭ್ಯ ಇಲ್ಲದ ಪ್ರದೇಶಗಳಲ್ಲಿ ಈ ಅಪ್‌ಡೇಟೆಡ್ ವರ್ಶನ್ ಹೆಚ್ಚು ಪ್ರಯೋಜನಕ್ಕೆ ಬರಲಿದೆ.

ಅದಕ್ಕೆ ಬಳಕೆದಾರರು ಮಾಡಬೇಕಾದದ್ದು ಇಷ್ಟೇ. ಇನ್‌ಸ್ಟಾ ಗ್ರಾಂ ಆ್ಯಪ್‌ಗೆ ಭೇಟಿ ಕೊಟ್ಟು ಅಲ್ಲಿ ಕಾಣುವ ಸೆಟ್ಟಿಂಗ್ಸ್ ಕ್ಲಿಕ್ಕಿಸಿ. ಅಕೌಂಟ್ ಆಯ್ಕೆ ಮಾಡಿಕೊಂಡು, ನಂತರ ಸೆಲ್ಯೂಲರ್ ಡೇಟಾ ಯೂಸ್ ಬಳಸುವ ಮೂಲಕ ಕಡಿಮೆ ಡೇಟಾ ಬಳಕೆ ಆಯ್ಕೆ ಮಾಡಿಕೊಳ್ಳಬಹುದು.

ಕೆಲವೊಂದು ಪ್ರದೇಶಗಳಲ್ಲಿ ಸೀಮಿತ ನೆಟ್‌ವರ್ಕ್ ಮತ್ತು 3G ಮತ್ತು 4G ವೇಗ ಲಭ್ಯವಿಲ್ಲದ ಸ್ಥಳಗಳಲ್ಲಿ ಇನ್‌ಸ್ಟಾ ಗ್ರಾಂ ಲೋ ಡೇಟಾ ಆಯ್ಕೆ ಅನುಕೂಲಕ್ಕೆ ಬರುತ್ತದೆ. ಇದರಿಂದ ಯಾವುದೇ ಅಡೆತಡೆ ಇಲ್ಲದೆಯೂ ಇನ್‌ಸ್ಟಾ ಗ್ರಾಂ ವೀಕ್ಷಿಸಬಹುದು. ಡೇಟಾ ಸೇವ್ ಆಯ್ಕೆಯು ಇನ್‌ಸ್ಟಾಗ್ರಾಂ ಬಳಕೆದಾರರಿಗೆ ಸುಲಲಿತ ಅನುಭವ ಒದಗಿಸುತ್ತದೆ. ಆ್ಯಂಡ್ರಾಯ್ಡ್ ಬಳಕೆದಾರರಿಗೆ ಮಾತ್ರ ಈ ಸೌಲಭ್ಯ ಲಭ್ಯ. ■